UASB LIBRARY
Newspaper Clippings
Pg .1 Monday 06-09-2021 Jai Kisan



ರೈತರ ಕುಟುಂಬಕ್ಕೆ ಆಸರೆಯ ಚಿಂತನೆ

ಸಿಎಂ ಬಸವರಾಜ ಬೊಮ್ಮಾಯಿ ಘೋಷಣೆ | 'ಮುಖ್ಯಮಂತ್ರಿ ರೈತ ವಿದ್ಯಾ ನಿಧಿ'ಗೆ ಚಾಲನೆ

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಮದುವೆ, ಆರೋಗ್ಯ ವಿಚಾರದಲ್ಲಿ ಅನ್ನದಾತರ ಕುಟುಂಬಕ್ಕೆ ಆಸರೆಯಾಗುವ ಯೋಜನೆ ರೂಪಿಸುವ ಚಿಂತನೆಯಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಭಾನುವಾರ ಆಯೋಜಿಸಿದ್ದ 'ಮುಖ್ಯಮಂತ್ರಿ ರೈತ ವಿದ್ಯಾ ನಿಧಿ' ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಮದುವೆ ಹಾಗೂ ಕಾಯಿಲೆ ಖರ್ಚು ಭರಿಸಲೆಂದು ರೈತರು ಸಾಲದ ಸುಳಿಗೆ ಸಿಲುಕುವುದನ್ನು ತಪ್ಪಿಸುವುದು ಚಿಂತನೆಯ ಉದ್ದೇಶವಾಗಿದೆ ಎಂದರು.

ರೈತರ ಮಕ್ಕಳ ಉನ್ನತ ವ್ಯಾಸಂಗಕ್ಕಾಗಿ ವಾರ್ಷಿಕ 2,500ರಿಂದ 11,000 ರೂ.ವರೆಗೆ ಶಿಷ್ಯವೇತನ ನೀಡುವ ಈ ಯೋಜನೆಯಡಿ 17 ಲಕ್ಷ ರೈತರ ಮಕ್ಕಳಿಗೆ ಒಟ್ಟು 1,000 ಕೋಟಿ ರೂ. ಪಾವತಿಸಿದ್ದು, ಇದು ವೆಚ್ಚವಲ್ಲ ಬಂಡವಾಳ ಹೂಡಿಕೆಯಾಗಿದೆ ಎಂದು ಸಮರ್ಥಿಸಿಕೊಂಡರು. ಸಮಾಜದ ಕಟ್ಟ ಕಡೆಯ ವ್ಯಕ್ತಿ ದೂರು-ದುಮ್ಮಾನಕ್ಕೆ ಸ್ಪಂದನೆ. ಯೋಚನೆ ಯೋಜನೆ ರೂಪ ಪಡೆದು ತ್ವರಿತವಾಗಿ ಅನುಷ್ಠಾನಕ್ಕೆ ಬಂದಿರುವುದು ಸಂತಸದ ಜತೆಗೆ ಸಾರ್ಥಕತೆಯ ಸಮಾಧಾನ ತಂದಿದೆ ಎಂದು ಬೊಮ್ಮಾಯಿ ಹೇಳಿದರು.

ಸಮಗ್ರ ಕೃಷಿ ನೀತಿಗೆ ಒತ್ತು: ಸಮಗ್ರ ಕೃಷಿ ನೀತಿಗೆ ಒತ್ತು ನೀಡುವ ಮೂಲಕ ಕೃಷಿ ಆವಲಂಬಿತರು, ಕೃಷಿ ಕೂಲಿಕಾರರ ಜೀವನಮಟ್ಟ ಸುಧಾರಣೆ ಮತ್ತು ಆರ್ಥಿಕವಾಗಿ ಸಶಕ್ತಗೊಳಿಸುವುದು ಸರ್ಕಾರ ಆದ್ಯತೆಯಾಗಿದೆ. ರೈತರು, ಕೂಲಿಕಾರರ ಬೆವರಿಗೆ ತಕ್ಕ ಬೆಲೆ ದೊರೆತರೆ ಸಂಕಷ್ಟ ಪರಿಹಾರವಾಗಲಿದೆ. ಇದಕ್ಕಾಗಿ ಕೊಯ್ಲೋತ್ತರ ನಿರ್ವಹಣೆ, ಕೃಷಿ ಉತ್ಪನ್ನಗಳ ವೈಜ್ಞಾನಿಕ ದಾಸ್ತಾನು, ಸಂಸ್ಕರಣೆ, ಮೌಲ್ಯವರ್ಧನೆ ಹಾಗೂ ಮಾರುಕಟ್ಟೆಗೆ ಸಾಗಣೆ ಸವಲತ್ತು ಕಲ್ಪಿಸಿ, ಉತ್ತಮ ಬೆಲೆ ಒದಗಿಸಲು ಪ್ರಯತ್ನಿಸಲಾಗುವುದು ಎಂದು ಬೊಮ್ಮಾಯಿ ಭರವಸೆ ನೀಡಿದರು.

ಕೃಷಿ ವಿಶ್ವವಿದ್ಯಾಲಯಗಳ ಆವರಣದಲ್ಲಿನ ಸಂಶೋಧನೆಗಳು ಸಕಾಲಕ್ಕೆ ರೈತರಿಗೆ ಲಭಿಸಿ, ಪೂರ್ಣ ಪ್ರಯೋಜನ ಪಡೆದುಕೊಳ್ಳಬೇಕಾಗಿದೆ. ಹೀಗಾಗಿ ಕ್ಯಾಂಪಸ್ ಆವರಣ ಬಿಟ್ಟು ರೈತರ ಜಮೀನುಗಳಿಗೆ ತೆರಳಲು ಕೃಷಿ ವಿಜ್ಞಾನಿಗಳಿಗೆ ಸಲಹೆ ನೀಡಿರುವೆ ಎಂದು ತಿಳಿಸಿದರು.



ವಿಧಾನಸೌಧದಲ್ಲಿ ನಡೆದ ಕಾರ್ಯಕ್ರಮದಲ್ಲಿ 'ರೈತ ವಿದ್ಯಾ ನಿಧಿ' ಫಲಾನುಭವಿ ವಿದ್ಯಾರ್ಥಿಗಳಿಗೆ ಸಾಂಕೇತಿಕವಾಗಿ ಚೆಕ್ ವಿತರಿಸಲಾಯಿತು.

ರೈತರ ಆದಾಯ ದ್ವಿಗುಣಗೊಳಿಸುವಂತಹ ದಿಟ್ಟ ನಿರ್ಧಾರದ ಮೂಲಕ ಪ್ರಧಾನಿ ನರೇಂದ್ರ ಮೋದಿಯವರು ಮುತ್ಸದ್ದಿತನ ಮೆರೆದಿದ್ದಾರೆ. ರಾಜಕಾರಣಿ ಮುಂದಿನ ಚುನಾವಣೆ ಯೋಚಿಸಿದರೆ, ಮುತ್ಸದ್ದಿ ಮುಂದಿನ ಜನಾಂಗದ ಬಗ್ಗೆ ಕಣ್ಣಿಟ್ಟು ಶ್ರಮಿಸುವರು.
| ಬಸವರಾಜ ಬೊಮ್ಮಾಯಿ ಮುಖ್ಯಮಂತ್ರಿ

ರೈತರ ಹೊಲಗಳಿಗೆ ಹೋಗಿ ಬೆಳೆಗಳಿಗೆ ಸಂಬಂಧಿಸಿದ ಸಮಸ್ಯೆ ಪರಿಹಾರೋಪಾಯ ಒದಗಿಸುವ 'ಕೃಷಿ ಸಂಜೀವಿನಿ' ವಾಹನ ಸದ್ಬಳಕೆಯಾಗಿದೆ. ಕೃಷಿ ಸೇವಾ ಸಂಸ್ಥೆಗಳ ನಿಧಿ ಬಳಸಿ ರಾಜ್ಯದ 743 ರೈತ ಸಂಪರ್ಕ ಕೇಂದ್ರಗಳಿಗೆ ಈ ವಾಹನಗಳನ್ನು ಒದಗಿಸುವ ಉದ್ದೇಶವಿದೆ.
| ಬಿ.ಸಿ.ಪಾಟೀಲ್ ಕೃಷಿ ಸಚಿವ

ಚುಟುಕು ಸಂವಾದ

ಬ್ಯಾಂಕ್ವೆಟ್ ಹಾಲ್‌ನಲ್ಲಿದ್ದ ಫಲಾನುಭವಿ ವಿದ್ಯಾರ್ಥಿಗಳ ಜತೆಗೆ ಬಸವರಾಜ ಬೊಮ್ಮಾಯಿ ಚುಟುಕು ಸಂವಾದ ನಡೆಸಿ, ಸರ್ಕಾರ ಜಾರಿಗೊಳಿಸಿದ ವಿದ್ಯಾ ನಿಧಿ ಯೋಜನೆ ಬಗ್ಗೆ ಅಭಿಪ್ರಾಯ ತಿಳಿದುಕೊಂಡರು. ಅಲ್ಲದೆ, ಸಮಾರಂಭದಲ್ಲಿ ಮಾತನಾಡಲು ಅವಕಾಶ ಪಡೆದ ವಿದ್ಯಾರ್ಥಿನಿ ಜ್ಯೋತಿ ಮತ್ತು ರೈತ ಶರಣಗೌಡ ಸಂತಸ ವ್ಯಕ್ತಪಡಿಸಿದರು. ಕೃಷಿ ಜತೆಗೆ ರೈತರ ಕುಟುಂಬದ ಏಳಿಗೆಗೂ ಸರ್ಕಾರ ಆದ್ಯತೆ ನೀಡಿದೆ ಎಂದು ಮುಕ್ತ ಕಂಠದಿಂದ ಪ್ರಶಂಸಿಸಿದರು.

ಹಸಿರುಮಯ, ಸನ್ಮಾನ

ಬ್ಯಾಂಕ್ವೆಟ್ ಹಾಲ್ ವೇದಿಕೆ ಹಸಿರುಮಯವಾಗಿತ್ತು. ಮುಖ್ಯದ್ವಾರ, ಸಭಾಂಗಣದಲ್ಲಿ ಧಾನ್ಯದ ರಾಶಿಗೆ ಅಲಂಕಾರ ಮಾಡಲಾಗಿತ್ತು. ಅತಿಥಿ-ಗಣ್ಯರಿಗೆ ಕೃಷಿ ಸಂಬಂಧಿತ ಪುಸ್ತಕಗಳ ಕಾಣಿಕೆ ನೀಡುವ ಜತೆಗೆ ಹಸಿರು ಶಲ್ಯ ಹೊದಿಸಿ ಸ್ವಾಗತಿಸಲಾಯಿತು. ಕೇಂದ್ರ ಸಚಿವರಾದ ನರೇಂದ್ರ ಸಿಂಗ್ ತೋಮರ್, ಶೋಭಾ ಕರಂದ್ಲಾಜೆ ಹಾಗೂ ಸಿಎಂ ಬಸವರಾಜ ಬೊಮ್ಮಾಯಿಗೆ ಮೈಸೂರು ಪೇಟ ತೊಡಿಸಿ, ಹಸಿರು ಶಾಲು ಹಾಗೂ ರೇಷ್ಮೆಹಾರ ಹಾಕಿ, ನೇಗಿಲು ಪ್ರತಿಕೃತಿಯ ಕಾಣಿಕೆ ನೀಡಿ ಸತ್ಕರಿಸಲಾಯಿತು. ಹಾರ-ತುರಾಯಿ ಬೇಡವೆಂಬ ಫರ್ಮಾನಿಗೆ ವ್ಯತಿರಿಕ್ತ ಸನ್ನಿವೇಶಕ್ಕೆ ಸಮಾರಂಭ ಸಾಕ್ಷಿಯಾಯಿತು.



ಕೃಷಿ ವ್ಯವಹಾರ, ರಫ್ತು ಉತ್ತೇಜಿಸಲೆಂದು ಕೈಗಾರಿಕಾ ಇಲಾಖೆಯಲ್ಲಿ ಪ್ರತ್ಯೇಕ ಕೋಶ ಸ್ಥಾಪಿಸುವ ಅಗತ್ಯವಿದೆ. ಕರ್ನಾಟಕದಲ್ಲಿ ಪ್ರತ್ಯೇಕವಾಗಿರುವ ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯಗಳನ್ನು ವಿಲೀನಗೊಳಿಸಿ ಸಂಶೋಧನೆ, ಹೊಸ ತಳಿಗಳ ಅಭಿವೃದ್ಧಿಗೆ ಒತ್ತು ನೀಡಬೇಕು.
| ಶೋಭಾ ಕರಂದ್ಲಾಜೆ ಕೇಂದ್ರ ಕೃಷಿ ರಾಜ್ಯ ಸಚಿವೆ

ಡಿಜಿಟಲ್ ಕೃಷಿ ಮಿಷನ್ ಸ್ಥಾಪನೆ

ಬೆಂಗಳೂರು: ಡಿಜಿಟಲ್ ಕೃಷಿ ಮಿಷನ್ ಸ್ಥಾಪಿಸುವ ಮೂಲಕ ವಿಜ್ಞಾನ-ತಂತ್ರಜ್ಞಾನದ ಆವಿಷ್ಕಾರಗಳನ್ನು ಬಳಸಿಕೊಳ್ಳಲು ಕೇಂದ್ರ ಸರ್ಕಾರ ನಿರ್ಧರಿಸಿದೆ ಎಂದು ಕೇಂದ್ರ ಕೃಷಿ, ರೈತರ ಕಲ್ಯಾಣ ಸಚಿವ ನರೇಂದ್ರ ಸಿಂಗ್ ತೋಮರ್ ಮಾಹಿತಿ ನೀಡಿದರು.



» ಕೃಷಿ ಅರ್ಥ ವ್ಯವಸ್ಥೆ ಬಲವರ್ಧನೆಗೆ ಕೇಂದ್ರ ಸರ್ಕಾರ ಉತ್ಸುಕ

» ಕೇಂದ್ರ ಕೃಷಿ ಸಚಿವ ನರೇಂದ್ರ ಸಿಂಗ್ ತೋಮರ್ ಮಾಹಿತಿ

ವಿಧಾನಸೌಧ ಬ್ಯಾಂಕ್ವೆಟ್ ಹಾಲ್‌ನಲ್ಲಿ ಭಾನುವಾರ ಆಯೋಜಿಸಿದ್ದ 'ಮುಖ್ಯಮಂತ್ರಿ ರೈತ ವಿದ್ಯಾ ನಿಧಿ ಕಾರ್ಯಕ್ರಮ' ಲೋಕಾರ್ಪಣೆ ಸಮಾರಂಭದಲ್ಲಿ ವಿದ್ಯಾರ್ಥಿಗಳ ಬ್ಯಾಂಕ್ ಖಾತೆಗೆ ಶಿಷ್ಯವೇತನ ನಗದು ನೇರ ವರ್ಗಾವಣೆ ಪ್ರಕ್ರಿಯೆಗೆ ಚಾಲನೆ ನೀಡಿ ಅವರು ಮಾತನಾಡಿದರು. ಕೃಷಿಯನ್ನು ಲಾಭದಾಯಕವಾಗಿಸಿ ಕೃಷಿಯತ್ತ ಜನರನ್ನು ಆಕರ್ಷಿಸಲು ಪ್ರಧಾನಿ ನರೇಂದ್ರ ಮೋದಿ ಅನೇಕ ಸುಧಾರಣಾ ಕ್ರಮಗಳನ್ನು ಕೈಗೊಂಡಿದ್ದಾರೆ. ಹಲವಾರು ಉಪಕ್ರಮಗಳ ಮೂಲಕ ಕೃತಿಯಲ್ಲಿ ಸಾಧಿಸಿ ತೋರಿಸಿದ್ದಾರೆ ಎಂದರು. ಕೃಷಿ ಹಾಗೂ ಸಂಬಂಧಿಸಿದ ಕ್ಷೇತ್ರಗಳ ನೀತಿ-ನಿರ್ಧಾರಗಳು, ಯೋಜನೆಗಳು, ರೈತರಿಗೆ ಸೌಲಭ್ಯ ಕಲ್ಪಿಸುವ ಕಾರ್ಯಕ್ರಮಗಳನ್ನು ಡಿಜಿಟಲ್ ಕೃಷಿ ಮಿಷನ್ ವ್ಯವಸ್ಥೆಯಡಿ ತಂದು, ಪರಿಣಾಮಕಾರಿ ಹಾಗೂ ಸಕಾಲಿಕ ಅನುಷ್ಠಾನಕ್ಕೆ ಒತ್ತು ನೀಡಲಾಗುವುದು ಎಂದವರು ಹೇಳಿದರು.

ವರ್ತಮಾನದ ತಲ್ಲಣಗಳಿಗೆ ಸ್ಪಂದಿಸುವ ಜತೆಗೆ ಕೃಷಿ ಅರ್ಥ ವ್ಯವಸ್ಥೆ ಬಲವರ್ಧನೆಗೆ ಕೇಂದ್ರ ಸರ್ಕಾರ ಉತ್ಸುಕವಾಗಿದ್ದು, 2022ರ ವೇಳೆಗೆ ರೈತರ ಆದಾಯ ದ್ವಿಗುಣಗೊಳಿಸುವ ನಿಟ್ಟಿನಲ್ಲಿ ಹಲವಾರು ಕ್ರಮ ಕೈಗೊಂಡು ಉತ್ಪಾದನೆ ಹೆಚ್ಚಿಸಲು, ನಷ್ಟ ತಗ್ಗಿಸಲು ಒತ್ತು ನೀಡಿದೆ. ರೈತ ಉತ್ಪಾದನೆ ಉತ್ಪಾದಕ ಕಂಪನಿಗಳ ಸ್ಥಾಪನೆ, ಒಂದು ಜಿಲ್ಲೆ ಒಂದು ಉತ್ಪನ್ನ, ಆಹಾರಧಾನ್ಯಗಳ ಸಂಸ್ಕರಣೆ -ಮೌಲ್ಯವರ್ಧನೆ, ಮಾರುಕಟ್ಟೆ ವ್ಯವಸ್ಥೆ, ರಫ್ತಿಗೆ ಉತ್ತೇಜನ, ಆತ್ಮನಿರ್ಭರ್ ಭಾರತ ಯೋಜನೆಯಡಿ ಕೃಷಿ ಮತ್ತು ಸಂಬಂಧಿಸಿದ ಕ್ಷೇತ್ರಗಳಲ್ಲಿ ಮೂಲ ಸವಲತ್ತು ಅಭಿವೃದ್ಧಿಗೆ 1.50 ಲಕ್ಷ ಕೋಟಿ ರೂ. ಮೀಸಲು ಇತ್ಯಾದಿ ನಿರ್ಧಾರಗಳನ್ನು ತೆಗೆದುಕೊಂಡಿದೆ ತೋಮರ್ ವಿವರಿಸಿದರು.

ಕರ್ನಾಟಕ ಮಾಡೆಲ್ ಅನುಕರಣೆ

ಕೃಷಿ ಕ್ಷೇತ್ರಕ್ಕೆ ನಾವೀನ್ಯತೆ ಸ್ಪರ್ಶ ನೀಡಿ, ತಂತ್ರಜ್ಞಾನದ ವೇದಿಕೆಗಳನ್ನು ಬಳಸಿಕೊಳ್ಳುವಲ್ಲಿ ಕರ್ನಾಟಕ ಮುಂಚೂಣಿಯಲ್ಲಿದೆ. ಕಿಸಾನ್ ಸಮ್ಮಾನ್ ನಿಧಿ ಸಹಾಯಧನ ಮಂಜೂರು ಸೇರಿ ಹಲವು ಮೊದಲುಗಳನ್ನು ಸಾಧಿಸಿ ಮೇಲ್ಪಂಕ್ತಿ ಹಾಕಿಕೊಟ್ಟಿದೆ ಎಂದು ಸಚಿವ ನರೇಂದ್ರ ಸಿಂಗ್ ತೋಮರ್ ಹೇಳಿದರು. ರೈತರ ಮಕ್ಕಳ ಉನ್ನತ ಶಿಕ್ಷಣಕ್ಕೆ ನೆರವಾಗಲೆಂದು ವಿದ್ಯಾನಿಧಿ ಯೋಜನೆ ಪ್ರಾರಂಭಿಸಿರುವುದು ದೇಶದಲ್ಲೇ ಮೊದಲು. ಇಷ್ಟರಲ್ಲೇ ವರ್ಚುವಲ್ ವೇದಿಕೆ ಮೂಲಕ ನಡೆಯಲಿರುವ ಎಲ್ಲ ರಾಜ್ಯಗಳ ಮುಖ್ಯಮಂತ್ರಿಗಳ ಸಭೆಯಲ್ಲಿ 'ಕರ್ನಾಟಕ ಮಾಡೆಲ್' ಅನುಸರಿಸಲು ಸಲಹೆ ನೀಡುವೆ ಎಂದರು. ಶಿಷ್ಯ ವೇತನದ ಅನುಕೂಲತೆ ಪಡೆದ ಅನ್ನದಾತರ ಮಕ್ಕಳು ಉನ್ನತ ವ್ಯಾಸಂಗದ ಒಳ್ಳೆಯ ಸಾಧನೆ ಮಾಡಿ ಕುಟುಂಬಕ್ಕೆ ಕೀರ್ತಿ ತರಬೇಕು. ಅಲ್ಲದೆ, ಕೃಷಿಯೊಂದಿಗಿನ ನಂಟು ಬಿಡಬಾರದು ಎಂದು ರೈತರ ಮಕ್ಕಳಿಗೆ ತೋಮರ್ ಸಲಹೆ ನೀಡಿದರು.

06-09-2021 Vv Pg 07

ಕ್ವಿಂಟಲ್‌ಗೆ 60 ಸಾವಿರ ರು. ತಲುಪಿದ ರಾಶಿ ಇಡಿ ಅಡಕೆ ಬೆಲೆ

ಶಿವಮೊಗ್ಗ: ಕಳೆದೊಂದು ವಾರದಿಂದ ಏರುಗತಿಯಲ್ಲಿ ಸಾಗುತ್ತಿರುವ ರಾಶಿಇಡಿ ಮಾದರಿಯ ಅಡಕೆ ಕ್ವಿಂಟಾಲ್‌ಗೆ 60 ಸಾವಿರ ದಾಖಲಿಸುವದರೊಂದಿಗೆ ಇನ್ನೊಂದು ಧಾರಣೆ ಮೈಲಿಗಲ್ಲು ಮುಟ್ಟಿದೆ.

ಭಾನುವಾರ ತೀರ್ಥಹಳ್ಳಿಯ ಸಹ್ಯಾದ್ರಿ ಅಡಕೆ ಮಾರಾಟ ಸಹಕಾರಿ ಸಂಸ್ಥೆಯಲ್ಲಿ ನಡೆದ ಅಡಕೆ ವಹಿವಾಟಿನಲ್ಲಿ ರಾಶಿಹಿಡಿ ಮಾದರಿಯ ಅಡಕೆ ಗರಿಷ್ಠ ₹60,009ಗೆ ಮಾರಾಟವಾಗಿದ್ದು ಅಡಕೆ ವಲಯದಲ್ಲಿ ಆಶ್ಚರ್ಯ ಮೂಡಿಸಿದೆ. ಆದರೆ ಕೊಪ್ಪ ಮತ್ತು ಶೃಂಗೇರಿಯಲ್ಲಿ ನಡೆದ ಮ್ಯಾಮ್‌ಕೋಸ್ ಮಹಿವಾಟಿನಲ್ಲಿ ರಾಶಿಇಡಿ ಮಾದರಿಯ ಅಡಕೆ ಗರಿಷ್ಠ 59,699ಕ್ಕೆ ಮಾರಾಟ ಕಂಡಿದೆ.

ಇನ್ನು ಉತ್ತರ ಕನ್ನಡದ ಶಿರಸಿ ಮಾರುಕಟ್ಟೆಯಲ್ಲಿ ಶನಿವಾರ ರಾಶಿ ಅಡಕೆ ಕ್ವಿಂಟಾಲ್‌ಗೆಗರಿಷ್ಠ52921 ದರದಾಖಲಾಗಿದ್ದರೆ, ಸಿದ್ದಾಪುರ ಮಾರುಕಟ್ಟೆಯಲ್ಲಿ ₹52009 ದರ ಕಂಡಿತ್ತು. ಆದರೆ 60 ಸಾವಿರ ದಾಟಿರುವುದು ಇದೇ ಮೊದಲಾಗಿದೆ.

06-09-2021 Kp Pg 06

For more information visit
University Library Website
Web - uasbagrilibindia.org
E-mail- librarian@uasbangalore.edu.in

"Remember, some things have to end for better things to begin"

Farm scientists told to innovate in the field, not just on campus

CM launches scholarship scheme for children of farmers

SPECIAL CORRESPONDENT
BENGALURU

For doubling farmers' income by 2024, Chief Minister Basavaraj Bommai has asked scientists of agricultural universities of the State to come out of campus and conduct crop experiments in the fields to ensure agricultural growth.

Mr. Bommai on Sunday launched the 'Chief Minister Raitha Vidya Nidhi', a scholarship scheme for children of farmers studying various courses from the 2021-22 academic year. He said farm scientists should not confine their experiments to the campus and farmers would be encouraged to experiment with a new variety of crop only if they are convinced of the benefits of innovations in their fields.

The government has set aside ₹1,000 crore for providing scholarships, ranging from ₹3,000 to 11,000 per year per student. About 17 lakh students are expected to receive scholarships.

According to a Government Order, the yearly scholarship amount will be directly credited into the bank accounts through direct benefit transfer (DBT) for the students who have completed their Class X and are pursuing courses in educational institutions or universities.



The first set of farmers' children who benefited from the Chief Minister Raitha Vidya Nidhi during its launch at Vidhana Soudha in Bengaluru on Sunday. ▪ K. MURALI KUMAR

Noting that agriculture has registered growth but not farmers' income, the Chief Minister said the time has come to provide good prices for farm produce. "One per cent growth in agriculture is equal to 4% growth in the manufacturing sector and 10% growth in the service sector," he said.

He said the country had faced food problems in the 1960s and the Green Revolution ensured self-sufficiency in food production. He said the State has 10 agro-climatic regions and scientists have to undertake farm innovations as per the conditions of climate and nature.

06-09-2021
Hindu Pg 04

06-09-2021
Uv Pg 01

ದೇಶದ 18ನೇ ತಳಿಯಾಗಿ ಘೋಷಣೆ | ನೋಂದಣಿಯಾದ ಕರ್ನಾಟಕದ ಏಕೈಕ ಎಮ್ಮೆ ತಳಿ

ಧಾರವಾಡ ಎಮ್ಮೆಗೆ ತಳಿ ಮಾನ್ಯತೆಯ ಹೆಮ್ಮೆ

• ಶಶಿಧರ್ ಬುದ್ನಿ

ಧಾರವಾಡ: ವಿಶ್ವಪ್ರಸಿದ್ಧ ಧಾರವಾಡ ಪೇಢೆಯ ಸ್ವಾದಿಷ್ಟಕ್ಕೆ ಕಾರಣವಾಗಿರುವ ಧಾರವಾಡ ಎಮ್ಮೆಗೆ ಈಗ ತಳಿ ಮಾನ್ಯತೆ' ಹೆಮ್ಮೆಯ ಕೊಂಬು ಮೂಡಿದೆ. ದೇಶದಲ್ಲಿ ಗುರುತಿಸಲಾದ ಎಮ್ಮೆ ತಳಿಗಳ ಪಟ್ಟಿಗೆ 18ನೇ ತಳಿಯಾಗಿ ಸೇರ್ಪಡೆಯಾಗಿದೆ. ವಿಶೇಷ ಎಂದರೆ 'ತಳಿ ಮಾನ್ಯತೆ' ಪಟ್ಟಿಗೆ ಸೇರ್ಪಡೆಯಾದ ಕರ್ನಾಟಕ ಏಕೈಕ ತಳಿ ಎಂಬ ಹೆಗ್ಗಳಿಕೆಗೂ ಪಾತ್ರವಾಗಿದೆ.

ಹರಿಯಾಣದ ರಾಷ್ಟ್ರೀಯ ಪಶು ಅನುವಂಶಿಕ ಸಂಸಾಧನ ಬ್ಯೂರೋದಿಂದ ಸೆ.3ರಂದು ಧಾರವಾಡ ಎಮ್ಮೆ ತಳಿಗೆ INDIA_BUFFALO_ 0800_ DHARWADI_01018 ಎಂಬ ನೋಂದಣಿ ಸಂಖ್ಯೆ ನೀಡಿದೆ. ಈ ನೋಂದಣಿ ಸಂಖ್ಯೆ ಮೂಲಕವೇ ಧಾರವಾಡ ಎಮ್ಮೆ ಇನ್ನು ವಿಶ್ವಮಟ್ಟದಲ್ಲಿ ಗುರುತಿಸಿಕೊಳ್ಳಲಿದೆ. ಇದಲ್ಲದೆ, ಈ ನೋಂದಣಿಯಿಂದ ಈ ತಳಿಯ ಅಭಿವೃದ್ಧಿ, ಹಾಗೂ ಗುಣಮಟ್ಟ ಹೆಚ್ಚಳಕ್ಕೆ ಭರಪೂರ ಅನುದಾನವೂ ಸಿಗಲಿದೆ.

2014ರಲ್ಲಿ ಧಾರವಾಡ ಎಮ್ಮೆ ತಳಿ ಅಧ್ಯಯನಕ್ಕೆ ಭಾರತೀಯ ಕೃಷಿ ಅನುಸಂಧಾನ ಸಂಸ್ಥೆ ಅನುಮೋದನೆ ಜತೆಗೆ 29 ಲಕ್ಷ ರೂ. ಅನುದಾನ ಸಹ ನೀಡಿತ್ತು. ಅದರಡಿ ಧಾರವಾಡ ಕೃಷಿ ವಿವಿ ಪಶು ವಿಜ್ಞಾನ ವಿಭಾಗವು ಧಾರವಾಡ ಎಮ್ಮೆ ತಳಿಯ ಗುಣಲಕ್ಷಣಗಳ ಸಂಶೋಧನಾ ಯೋಜನೆ' ಆಡಿ ಸಂಶೋಧನೆ ಕೈಗೊಂಡು, 2017ರ ಡಿಸೆಂಬರ್‌ನಲ್ಲಿ ಅಂತಿಮ ವರದಿ ಸಲ್ಲಿಸಿತ್ತು.

ಅಧ್ಯಯನ ನಡೆಸಿದ್ದು ಹೇಗೆ?: ಉತ್ತರ ಕರ್ನಾಟಕದ 14 ಜಿಲ್ಲೆಗಳಲ್ಲಿ ಈ ಎಮ್ಮೆ ತಳಿಗಳಿವೆ. ಈ ಪೈಕಿ ಧಾರವಾಡ, ಬಾಗಲಕೋಟೆ, ಬೆಳಗಾವಿ ಹಾಗೂ ಗದಗ ಜಿಲ್ಲೆಯ ಆಯ್ದ ಒಟ್ಟು 64 ಹಳ್ಳಿಗಳಲ್ಲಿ ಕೃಷಿ ವಿವಿ ಪಶು ವಿಜ್ಞಾನ ವಿಭಾಗದ ವಿಜ್ಞಾನಿ ಡಾ। ವಿ.ಎಸ್.ಕುಲಕರ್ಣಿ ನೇತೃತ್ವದಲ್ಲಿ 3937 ರೈತರ ಬಳಿ ಇರುವ 10,650 ಧಾರವಾಡ ಎಮ್ಮೆಗಳ ಬಗ್ಗೆ ಅಧ್ಯಯನ ಕೈಗೊಂಡು ಅಂತಿಮ ವರದಿ ಸಿದ್ಧಪಡಿಸಲಾಗಿತ್ತು. ಅಧ್ಯಯನ ವರದಿ ಆಧರಿಸಿ ಆ.16ರಂದು ಸುದೀರ್ಘವಾಗಿ ಚರ್ಚಿಸಲಾಗಿತ್ತು. ಸೆ.3ರಂದು ತಳಿ ನೋಂದಣಿ ಆಗಿರುವ ಬಗ್ಗೆ ಅಧಿಕೃತವಾಗಿ ಘೋಷಿಸಲಾಗಿದೆ.

ಅಧ್ಯಯನ ವರದಿಯಲ್ಲೇನಿದೆ?: 2012ರ ಜಾನುವಾರು ಗಣತಿ ಪ್ರಕಾರ ಈ ನಾಲ್ಕು ಜಿಲ್ಲೆಗಳಲ್ಲಿ 12.05 ಲಕ್ಷ ಎಮ್ಮೆಗಳಿದ್ದು, ಈ ಪೈಕಿ ಶೇ.80ರಷ್ಟು ಧಾರವಾಡ ಎಮ್ಮೆಗಳೇ ಇರುವುದು ಅಧ್ಯಯನದಲ್ಲಿ ಕಂಡು ಬಂದಿದೆ. ಎಮ್ಮೆಗಳ ಆಳತೆ, ಆಕಾರ, ಗುಣಧರ್ಮಗಳ ಬಗ್ಗೆ ಸಮಗ್ರವಾಗಿ ಅಧ್ಯಯನ ಮಾಡಲಾಗಿದ್ದು ಎಮ್ಮೆಗಳ ಹಾಲಿನ ಉತ್ಪಾದನೆ, ಸಂತಾನೋತ್ಪತ್ತಿಯ ಸಾಮರ್ಥ್ಯ, ಶಕ್ತಿ ಪರೀಕ್ಷೆಯೂ ಸಹ ಮಾಡಲಾಗಿದೆ. ರಕ್ತದ ಮಾದರಿ ಸಂಗ್ರಹಿಸಿ ಅವುಗಳ ಡಿಎನ್‌ಎ ಕುರಿತಂತೆಯೂ ಹೆಚ್ಚಿನ ಸಂಶೋಧನೆ ಕೈಗೊಳ್ಳಲಾಗಿದೆ. ಇನ್ನೂ ಅರ್ಧಚಂದ್ರಾಕೃತಿ ಕೋಡು, ಕಪ್ಪು ಬಣ್ಣದ ಚರ್ಮ ಇರುವ ಎಮ್ಮೆಗಳು ಹೆಚ್ಚಾಗಿರುವುದು ತಿಳಿದು ಬಂದಿದೆ. ಇದಲ್ಲದೇ ಒಂದು ಎಮ್ಮೆ ಒಂದು ಸೂಲಿನಲ್ಲಿ 980 ಲೀಟರ್ ಹಾಲು ಕೊಡುವ ಸಾಮರ್ಥ್ಯ ಇದ್ದು ವರ್ಷದ 335 ದಿನ ಹಾಲು ಕೊಡುವ ಗುಣಲಕ್ಷಣ ಹೊಂದಿದೆ. ಈ ಹಾಲಿನಲ್ಲಿ ಶೇ.7ರಷ್ಟು ಕೊಬ್ಬಿನಾಂಶ ಇದ್ದು ಕೊಬ್ಬು ರಹಿತ ಉತ್ಪನ್ನಗಳಲ್ಲಿ ಶೇ.9.5ರಷ್ಟು ಇದೆ ಎಂಬುದನ್ನು ಅಧ್ಯಯನದಲ್ಲಿ ದಾಖಲಿಸಲಾಗಿದೆ.



ಕೋಣಗಳೇ ಕಾರಣ

ಧಾರವಾಡ ಎಮ್ಮೆ ತಳಿಗಳ ಗುಣಮಟ್ಟಕ್ಕೆ ಕೋಣವೇ ಮುಖ್ಯ ಆಗಲಿದ್ದು, ಹೀಗಾಗಿ ಈ ತಳಿಯ ಗುಣಮಟ್ಟದ ಕೋಣಗಳನ್ನು ಸಿದ್ಧಪಡಿಸಿ, ಅವುಗಳ ವೀರ್ಯ ಸಂಗ್ರಹಿಸುವ ಕಾರ್ಯ ಆಗಬೇಕಾಗಿದೆ. ಈಗ ತಳಿಯಾಗಿ ಘೋಷಣೆಯಿಂದ ಈ ತಳಿ ಅಭಿವೃದ್ಧಿ, ಗುಣಮಟ್ಟ ಹೆಚ್ಚಳಕ್ಕೆ ಅದ್ಯತೆ ಸಿಗಲಿದೆ. ಅದರಲ್ಲೂ ಈ ತಳಿಯ ಉತ್ತಮ ವೀರ್ಯದಿಂದ ಜನಿಸುವ ಎಮ್ಮೆಗಳು ಮತ್ತಷ್ಟು ಗುಣಮಟ್ಟದಿಂದ ಕೂಡಿರಲು ಸಾಧ್ಯವಾಗಲಿದ್ದು, ಇದರಿಂದ ಈ ತಳಿ ತ್ವರಿತವಾಗಿ ಮುಂದೆ ಬರಲಿದೆ ಎನ್ನುತ್ತಾರೆ ಕೃಷಿ ವಿವಿ ಪ್ರಾಣಿ ವಿಜ್ಞಾನ ವಿಭಾಗದ ನಿವೃತ್ತ ಮುಖ್ಯಸ್ಥ ವಿ.ಎಸ್.ಕುಲಕರ್ಣಿ.

ಖಾದ್ಯತೈಲ ಉತ್ಪಾದನೆಯಲ್ಲಿ ಸ್ವಾವಲಂಬನೆಯೆಡೆಗೆ ನಡೆಯುವುದು ಭಾರತಕ್ಕೆ ಅಂಥಾ ಕಷ್ಟವೇನಲ್ಲ

ತಣಿಯದ ತಾಳೆ ಎಣ್ಣೆಯ ದಾಹ



ವಿಶ್ಲೇಷಣೆ

ವಿ. ಗಾಯತ್ರಿ

ಪ್ರಧಾನಿ ನರೇಂದ್ರ ಮೋದಿ ಅವರು ಆಗಸ್ಟ್ 15ರಂದು ಎಣ್ಣೆ ತಾಳೆ ಬೇಸಾಯಕ್ಕೆ ₹ 11 ಸಾವಿರ ಕೋಟಿ ಪ್ರೋತ್ಸಾಹದನವನ್ನು ಘೋಷಿಸಿ, 6.5 ಲಕ್ಷ ಹೆಕ್ಟೇರ್ ಭೂಮಿಯನ್ನು ಈ ಬೇಸಾಯದಡಿ ತರಲು ಉದ್ದೇಶಿಸಿರುವುದಾಗಿ ತಿಳಿಸಿದರು. ಮುಂದಿನ 15 ವರ್ಷಗಳಲ್ಲಿ ತಾಳೆ ಎಣ್ಣೆಯ ಉತ್ಪಾದನೆಯನ್ನು ದ್ವಿಗುಣಗೊಳಿಸುವ ಇಂಗಿತವನ್ನು ವ್ಯಕ್ತಪಡಿಸಿದರು. ಸದ್ಯ ಭಾರತವು ತನ್ನ ಅಗತ್ಯದ ಖಾದ್ಯತೈಲದ ಶೇ 60ರಷ್ಟನ್ನು ಆಮದು ಮಾಡಿಕೊಳ್ಳುತ್ತಿದ್ದು, ಇದರಲ್ಲಿ ಶೇ 40ರಷ್ಟು ತಾಳೆ ಎಣ್ಣೆಯಾಗಿದೆ.

ಭಾರತ ಪ್ರಪಂಚದಲ್ಲೇ ಅತಿಹೆಚ್ಚು ತಾಳೆ ಎಣ್ಣೆ ಬಳಕೆ ಮಾಡುತ್ತಿದ್ದು, ಇಂಡೊನೇಷ್ಯಾ ಮತ್ತು ಮಲೇಷ್ಯಾದಿಂದ ವರ್ಷಕ್ಕೆ 1.84 ಕೋಟಿ ಟನ್ ಆಮದು ಮಾಡಿಕೊಳ್ಳುತ್ತದೆ. ಸದ್ಯದ ಬಳಕೆಯ ಪ್ರಮಾಣದಲ್ಲಿ ಭಾರತಕ್ಕೆ 2.5 ಕೋಟಿ ಟನ್ ಖಾದ್ಯತೈಲದ ಅವಶ್ಯಕತೆ ಇದ್ದು, 1.5 ಕೋಟಿ ಟನ್ ಮಾತ್ರ ನಮ್ಮಲ್ಲಿ ಉತ್ಪಾದನೆಯಾಗುತ್ತಿದೆ. ಇದು ಮುಖ್ಯವಾಗಿ ಎಣ್ಣೆ ಕಾಳುಗಳಿಂದ ಬರುತ್ತಿದೆ.

ಪ್ರಪಂಚದಲ್ಲೇ ಅತ್ಯಂತ ಜನಪ್ರಿಯವಾಗಿರುವ ತಾಳೆ ಎಣ್ಣೆ ಸದ್ಯ ಜಾಗತಿಕ ಮಾರುಕಟ್ಟೆಯಲ್ಲಿ 7.7 ಕೋಟಿ ಟನ್ ಲಭ್ಯವಿದ್ದು, 2024ರ ವೇಳೆಗೆ 10.76 ಕೋಟಿ ಟನ್‌ನ ನಿರೀಕ್ಷೆ ಹೊಂದಲಾಗಿದೆ. ಇದರ ಶೇ 68ರಷ್ಟು ಪಾಲು ಆಹಾರದಲ್ಲಿ, ಶೇ 25ರಷ್ಟು ಕೈಗಾರಿಕೆಯಲ್ಲಿ ಮತ್ತು ಶೇ 5ರಷ್ಟು ಜೈವಿಕ ಇಂಧನದಲ್ಲಿ ಬಳಕೆಯಾಗುತ್ತದೆ. ತಾಳೆ ಎಣ್ಣೆಯ ವಿಶಿಷ್ಟ ಗುಣಗಳಿಂದ ಅದನ್ನು ಅಲಂಕಾರ ಸಾಮಗ್ರಿ, ಸಿದ್ಧ ಆಹಾರ ಮತ್ತು ಡಿಟರ್ಜೆಂಟ್ ಕೈಗಾರಿಕೆಗಳಲ್ಲಿ ವ್ಯಾಪಕವಾಗಿ ಬಳಸುತ್ತಾರೆ. ಜೈವಿಕ ಇಂಧನದಲ್ಲಿ ಇದರ ಬೇಡಿಕೆ ಅಧಿಕವಾಗಿದೆ.

ಇದರ ಹೆಕ್ಟೇರ್‌ವಾರು ಉತ್ಪಾದನೆಯು ಎಣ್ಣೆಕಾಳುಗಳಿಗಿಂತ ಹತ್ತು ಪಟ್ಟು ಹೆಚ್ಚು. ಅಗ್ಗವಾಗಿ ದೊರಕುವ 'ಸರ್ವಗುಣ ಸಂಪನ್ನ' ತಾಳೆ ಎಣ್ಣೆಗೆ ಜಾಗತಿಕ ಬೇಡಿಕೆ ಗಗನಕ್ಕೇರಿ ಆಮದು ಸುಂಕವನ್ನು ಕನಿಷ್ಠಗೊಳಿಸಿದ್ದರಿಂದ, ಕೆಲ ಉಷ್ಣವಲಯದ ದೇಶಗಳು ಇದರ ಬೇಸಾಯಕ್ಕೆ ಮುಗಿಬಿದ್ದವು.

ಎಣ್ಣೆ ತಾಳೆಯು ಭೂಮಧ್ಯ ರೇಖೆಯ 20 ಡಿಗ್ರಿ ಒಳಗಡೆ ಬರುವ ಪ್ರದೇಶದಲ್ಲಷ್ಟೇ ಬೆಳೆಯುತ್ತದೆ. ದುರಂತವೆಂದರೆ, ಇಲ್ಲಿ ಸರ್ವಶ್ರೇಷ್ಠ ಮಳೆಕಾಡುಗಳಿದ್ದು ಪ್ರಪಂಚದ ಶೇ 80ರಷ್ಟು ಜೀವವೈವಿಧ್ಯವನ್ನು ಹೊಂದಿವೆ. ಪ್ರಪಂಚದ ತಾಳೆ ಎಣ್ಣೆಯ ಶೇ 80ರಷ್ಟು ಉತ್ಪಾದನೆ ಮಾಡಿ ರಫ್ತು ಮಾಡುತ್ತಿರುವ ಇಂಡೊನೇಷ್ಯಾ ಮತ್ತು ಮಲೇಷ್ಯಾ, ಎಣ್ಣೆ ತಾಳೆ ಬೇಸಾಯಕ್ಕೆ ತಮ್ಮ ಅಮೂಲ್ಯ ಮಳೆಕಾಡಿನ ಅರ್ಧ ಭಾಗವನ್ನು ಈಗಾಗಲೇ ಕಳೆದುಕೊಂಡಿವೆ. ಇಂಡೊನೇಷ್ಯಾದಲ್ಲಿ 2002ರಿಂದ 2020ರವರೆಗೆ ಸುಮಾರು 92.69 ಲಕ್ಷ ಹೆಕ್ಟೇರ್ ಮತ್ತು ಮಲೇಷ್ಯಾದಲ್ಲಿ ಶೇ 47ರಷ್ಟು ಕಾಡಿನ ನಾಶವಾಗಿದೆ. ಅರಣ್ಯವನ್ನು ನಂಬಿ ಬದುಕುವ ಜನರ ಬದುಕು ಮೂರಾಬಟ್ಟೆಯಾಗಿದೆ. ರೈತರು ಎಣಿಯಿಲ್ಲದ ಸಂಕಷ್ಟಕ್ಕೊಳಗಾಗಿದ್ದಾರೆ. ಇಷ್ಟಿದ್ದೂ ತಾಳೆ ಎಣ್ಣೆಗೆ ಮಾತ್ರ ಜಾಗತಿಕ ಬೇಡಿಕೆ ಹೆಚ್ಚುತ್ತಲೇ ಇದೆ. ಬಡ ದೇಶಗಳಲ್ಲಿ ಖಾದ್ಯತೈಲ ಮತ್ತು ಶ್ರೀಮಂತ ದೇಶಗಳಲ್ಲಿ ವಿವಿಧ ಕೈಗಾರಿಕೆಗಳಿಗೆ ಇದೇ ಮುಖ್ಯ ಆಧಾರವಾಗಿದೆ.

ಭಾರತದಲ್ಲಿ ತಾಳೆ ಎಣ್ಣೆ ಉತ್ಪಾದನೆ ಹೆಚ್ಚಿಸಲು ಕೇಂದ್ರ ಸರ್ಕಾರ 2014- 15ರಲ್ಲಿ 'ನ್ಯಾಷನಲ್ ಮಿಷನ್ ಆನ್ ಆಯಿಲ್‌ಸೀಡ್ಸ್ ಆ್ಯಂಡ್ ಆಯಿಲ್ ಪಾಮ್' (NMOOP) ಸ್ಥಾಪಿಸಿ 2018-19ರಲ್ಲಿ ಅದನ್ನು 'ರಾಷ್ಟ್ರೀಯ ಆಹಾರ ಭದ್ರತಾ ಮಿಷನ್' ಜೊತೆ ವಿಲೀನಗೊಳಿಸಿತು. 2019ರಲ್ಲಿ ಕೇಂದ್ರ ಕೃಷಿ ಸಚಿವರು, ದೇಶದ 19 ರಾಜ್ಯಗಳ 19.30 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಎಣ್ಣೆ ತಾಳೆ ಬೆಳೆಯುತ್ತಿದ್ದು, ಕಳೆದ ಐದು ವರ್ಷಗಳಲ್ಲಿ ತಾಳೆ ಎಣ್ಣೆ ಉತ್ಪಾದನೆ ಶೇ 45ರಷ್ಟು ಹೆಚ್ಚಾಗಿರುವುದಾಗಿ ಘೋಷಿಸಿದರು. ಆದರೆ ವಾಸ್ತವದಲ್ಲಿ ಎಣ್ಣೆ ತಾಳೆ ಬೆಳೆಯುತ್ತಿದ್ದದ್ದು 16 ರಾಜ್ಯಗಳ 3.49 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಮತ್ತು ಅದರಲ್ಲಿ ಫಸಲು ಕೊಡುತ್ತಿದ್ದ ಪ್ರದೇಶ 8 ರಾಜ್ಯಗಳ 1.35 ಲಕ್ಷ ಹೆಕ್ಟೇರ್ ಮಾತ್ರ.

ದೇಶದಲ್ಲಿ ಎಣ್ಣೆ ತಾಳೆ ಬೇಸಾಯ ನೆಲ ಕಚ್ಚಿರುವುದನ್ನು ಸಚಿವರು ಮರೆಮಾಚಿದ್ದರು. ನೆಲಕಚ್ಚಲು ಕಾರಣಗಳೂ ಸ್ಪಷ್ಟವಾಗಿದ್ದವು. ಎಣ್ಣೆ ತಾಳೆ ಫಸಲು ಕೊಡಲು ಏಳು ವರ್ಷ ಬೇಕು. ಆ ಅವಧಿಯಲ್ಲಿ ರೈತರಿಗೆ ಆದಾಯ ಶೂನ್ಯ. ಮುಂದೆ ಇಳುವರಿ ಖಾತರಿ ಇಲ್ಲ. ಛತ್ತೀಸಗಡದಲ್ಲಿ ಅರ್ಧಕ್ಕರ್ಧ ಮರಗಳು ಫಲವನ್ನೇ ಕೊಡಲಿಲ್ಲ. ಕರ್ನಾಟಕದಲ್ಲಿ ಹಣ್ಣಿನ ಇಳುವರಿ ಮತ್ತು ಕಚ್ಚಾ ಎಣ್ಣೆ ಪ್ರಮಾಣ ತೀರಾ ಕಡಿಮೆ. ಸಮತಟ್ಟು ಭೂಮಿ, ಅಧಿಕ ಗೊಬ್ಬರ ಬೇಡುವ ಈ ಬೆಳೆಗೆ ಗಿಡವೊಂದಕ್ಕೆ ದಿನಕ್ಕೆ 300 ಲೀಟರ್ ನೀರು ಬೇಕು. ಕೀಟರೋಗ ಬಾಧೆಗೆ ಮಿತಿಯಿಲ್ಲದೆ ರಾಸಾಯನಿಕ ಸಿಂಪಡಣೆ. ಸ್ವತಂತ್ರ ಮಾರುಕಟ್ಟೆ ಇಲ್ಲದ ಇದನ್ನು ಸಸಿ ಕೊಟ್ಟ ಕಂಪನಿಗೇ ಮಾರಬೇಕು.

ಮೂರು ವರ್ಷದಲ್ಲಿ ಸ್ಥಳೀಯವಾಗಿ ಸಂಸ್ಕರಣಾ ಘಟಕ ತೆಗೆಯುವ ಆಶ್ವಾಸನೆಯೊಂದಿಗೆ ರೈತರಿಗೆ ಸಸಿ ಕೊಡುವ ಕಂಪನಿಗಳು ಫಸಲು ಕೈಗೆ ಬಂದರೂ ಸುಳಿವೇ ಇರುವುದಿಲ್ಲ. ರೈತರು ಬಹುದೂರ ಸಾಗಣೆ ಮಾಡಿ ತಲುಪಿಸುವ ವೇಳೆಗೆ ಹಣ್ಣು ಗುಣಮಟ್ಟ ಕಳೆದುಕೊಂಡು ತಿರಸ್ಕೃತವಾಗುವುದೇ ಹೆಚ್ಚು. ಎಣ್ಣೆ ತಾಳೆಯ ಕಟಾವು, ನಾಟಿ ಮತ್ತು ಸಂಸ್ಕರಣೆಗಳಲ್ಲಿ ಬೃಹತ್ ತ್ಯಾಜ್ಯ ಉತ್ಪತ್ತಿಯಾಗುತ್ತಿದ್ದು, ಇದುವರೆಗೂ ಅದರ ಶೇ 10ರಷ್ಟು ಮಾತ್ರ ಕೈಗಾರಿಕಾ ಕಚ್ಚಾ ವಸ್ತುವಾಗಿ ಬಳಕೆಯಾಗುತ್ತಿದೆ. ಎಣ್ಣೆ ತಾಳೆ ಬೇಸಾಯದಲ್ಲಿ ಉತ್ಸಾಹದಿಂದ ತೊಡಗಿಕೊಂಡ ಆಂಧ್ರಪ್ರದೇಶ, ಛತ್ತೀಸಗಡದ ಹೆಚ್ಚಿನ ರೈತರು ಫಲ ಕೊಡುವ ಮುನ್ನವೇ ಬೆಳೆ ನಾಶಪಡಿಸಿದ್ದಾರೆ. ಕರ್ನಾಟಕದಲ್ಲಿ 'ಬಂಗಾರದ ಬೆಳೆ' ಎಂದು ರೈತರನ್ನು ಆಕರ್ಷಿಸಿ ಭದ್ರಾ ಅಚ್ಚುಕಟ್ಟು ಪ್ರದೇಶದ ರೈತರನ್ನು ನೆಲಕಚ್ಚಿಸಿದ ದುರಂತ ನಮ್ಮ ಕಣ್ಣಮುಂದಿದೆ. ಆರು ಈಶಾನ್ಯ ರಾಜ್ಯಗಳಲ್ಲಿ 2.18 ಲಕ್ಷ ಹೆಕ್ಟೇರ್ ಪ್ರದೇಶವನ್ನು ಸರ್ಕಾರ ಎಣ್ಣೆ ತಾಳೆ ಬೇಸಾಯಕ್ಕೆ ಗುರುತಿಸಿದ್ದರೂ ಯಾವ ರಾಜ್ಯವೂ ಹೆಚ್ಚಿನ ಆಸಕ್ತಿ ತೋರಲಿಲ್ಲ.

ಹೀಗಿದ್ದೂ ಕೇಂದ್ರ ಸರ್ಕಾರ ಈಗ ರೈತರಿಗೆ ಆರ್ಥಿಕ ಬೆಂಬಲ ಘೋಷಿಸಿ, ನರ್ಸರಿ ಮತ್ತು ಎಣ್ಣೆ ಸಂಸ್ಕರಣಾ ಮಿಲ್‌ಗಳನ್ನು ಸ್ಥಾಪಿಸಲು ಖಾಸಗಿ ಕಂಪನಿಗಳನ್ನು ಆಹ್ವಾನಿಸಿದೆ. ಅದಾನಿ ಮತ್ತು ಪತಂಜಲಿ ಕಂಪನಿಗಳು ಇದರಲ್ಲಿ ತೀವ್ರ ಆಸಕ್ತಿ ತೋರಿ, ವಿವಿಧ ರಾಜ್ಯ ಸರ್ಕಾರಗಳ ಜೊತೆ ಒಪ್ಪಂದಕ್ಕೆ ಸಹಿ ಹಾಕಿವೆ. ಕಾಡು ನಾಶಪಡಿಸದೆ ಎಣ್ಣೆ ತಾಳೆ ಬೇಸಾಯ ಮಾಡಬೇಕಾದರೆ, ಉತ್ಪತ್ತಿ ಕಳೆದುಕೊಂಡಿರುವ ಭತ್ತದ ಗದ್ದೆಗಳನ್ನು ಮತ್ತು ಕಾಡಂಚಿನಲ್ಲಿ ಗಿರಿಜನರು ಬೇಸಾಯ ಮಾಡುವ ಭೂಮಿಯನ್ನು ಬಳಸಬಹುದು ಎಂದು ಭಾರತೀಯ ವಿಜ್ಞಾನ ಸಂಸ್ಥೆಯ ಡಾ. ಉಮೇಶ್ ಶ್ರೀನಿವಾಸನ್ ಶಿಫಾರಸು ಮಾಡಿದ್ದಾರೆ! ಪಟ್ಟಣ ಸೇರಿದ ಜಮೀನುದಾರರ ಬೀಳು ಭೂಮಿಗಳನ್ನು ಬಳಸಿಕೊಳ್ಳುವುದಾಗಿ ಆಂಧ್ರಪ್ರದೇಶ ಸರ್ಕಾರ ಹೇಳಿದೆ. ಇದೀಗ ಭಾರತೀಯ ಕೃಷಿ ಅನುಸಂಧಾನ ಪರಿಷತ್ (ಐಸಿಎಆರ್) ಅಂಡಮಾನ್- ನಿಕೊಬಾರ್‌ಗೆ ದೌಡಾಯಿಸಿ, ಅಲ್ಲಿ ಎಣ್ಣೆ ತಾಳೆ ಬೇಸಾಯಕ್ಕೆ ಇರುವ ಅವಕಾಶಗಳನ್ನು ಶೋಧಿಸುತ್ತಿದೆ. ಒಟ್ಟಿನಲ್ಲಿ ಇವೆಲ್ಲಾ ಪ್ರಹಸನದಂತೆ ಕಾಣುತ್ತಿವೆ.

ಖಾದ್ಯತೈಲ ಉತ್ಪಾದನೆಯಲ್ಲಿ ಸ್ವಾವಲಂಬನೆಯೆಡೆಗೆ ನಡೆಯುವುದು ಭಾರತಕ್ಕೆ ಅಂತಹ ಕಷ್ಟವೇನಲ್ಲ. ನಮ್ಮಲ್ಲಿ ಶೇ 70ಕ್ಕೂ ಹೆಚ್ಚಿರುವ ಮಳೆಯಾಶ್ರಿತ ಪ್ರದೇಶಕ್ಕೆ ಎಣ್ಣೆ ಕಾಳುಗಳು ಹೇಳಿ ಮಾಡಿಸಿದ ಬೆಳೆಗಳು. 1990ರ ದಶಕದಲ್ಲಿ 'ಹಳದಿ ಕ್ರಾಂತಿ'ಯ ಮೂಲಕ ದೇಶದಲ್ಲಿ ಎಣ್ಣೆ ಕಾಳುಗಳ ಉತ್ಪಾದನೆಯನ್ನು ಹೆಚ್ಚು ಮಾಡಲು ಪ್ರಯತ್ನಿಸಿದರೂ, ವಿಶ್ವ ವ್ಯಾಪಾರ ಸಂಘಟನೆಯ (ಡಬ್ಲ್ಯುಟಿಒ) ನಿಬಂಧನೆಗಳಿಂದಾಗಿ ಯಶಸ್ಸು ಕಾಣಲಾಗಲಿಲ್ಲ. ಭಾರತ ತನ್ನ ಎಣ್ಣೆಕಾಳು ಬೆಳೆಗಾರರಿಗೆ ಕೊಡುವ (ಅಲ್ಪ) ಸಬ್ಸಿಡಿಯ ಮೇಲೆ ಸದಸ್ಯ ದೇಶಗಳ ಕಿಂಗಣ್ಣು.

ಎಣ್ಣೆಕಾಳು ಫಸಲಿಗೆ ಸೂಕ್ತ ಮಾರುಕಟ್ಟೆ ವ್ಯವಸ್ಥೆ, ಹೆಚ್ಚು ರಾಸಾಯನಿಕ ಬಳಸದೇ ಉತ್ಪಾದನೆ ಹೆಚ್ಚಳಕ್ಕೆ ಅಗತ್ಯವಾದ ಮಾರ್ಗೋಪಾಯಗಳನ್ನು ಕಂಡುಕೊಂಡರೆ, ದೇಶವು ಖಾದ್ಯತೈಲ ಉತ್ಪಾದನೆಯಲ್ಲಿ ಸ್ವಾವಲಂಬನೆ ಸಾಧಿಸುವುದು ಅಸಾಧ್ಯವೇನಲ್ಲ.

